**ದಿನಾಂಕ 11.08.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀಸವಾಲುಃ ಶ್ರೀ ಬಿ.ಎನ್.ಎ. ವಕೀಲರಿಂದಃ</u>**

1. ನನ್ನ ತಂದೆ ಮೆಕ್ಯಾನಿಕಲ್ ಇಂಜಿನಿಯರ್ ಎಂದರೆ ಸರಿ. ನನ್ನ ತಂದೆಗೆ ಕಡಿಮೆ ಸಂಬಳ ಬರುತ್ತಿತ್ತು. ನನ್ನ ದೊಡ್ಡಪ್ಪನ ಮಕ್ಕಳೂ ಸಹ ನಮ್ಮ ಮನೆಯಲ್ಲಿಯೇ ಇದ್ದು, ನಮ್ಮೆಲ್ಲರನ್ನು ಸಾಕಲು ಅವರಿಗೆ ಬರುತ್ತಿದ್ದ ಸಂಬಳ ಸಾಕಾಗುತ್ತಿರಲಿಲ್ಲ. ಮೇಲೆ ಹೇಳಿದಂತೆ ನಾನು ಪ್ರಮಾಣ ಪತ್ರದಲ್ಲಿ ಅಥವಾ ವಾದ ಪತ್ರದಲ್ಲಿ ತಿಳಿಸಿಲ್ಲ. ನಾನು ಆಗ ತುಂಬಾ ಚಿಕ್ಕವಳಿದ್ದ ಕಾರಣ ನನ್ನ ತಂದೆಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಕಡಿಮೆ ಸಂಬಳ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.
2. ನನ್ನ ತಂದೆ ತುಮಕೂರಿನ ಶ್ರೀದೇವಿ ಪಾಲಿಟೆಕ್ನಿಕ್ ಮತ್ತು ಆರ್ಯಭಾರತಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕೆಲಸ ಮಾಡಿದ್ದರು ಎಂದರೆ ಸಾಕ್ಷಿಯು ಶ್ರೀದೇವಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಕೆಲಸ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮೈಸೂರಿನಲ್ಲಿ ಇದ್ದಾಗಿನಿಂದಲೂ ನನ್ನ ತಂದೆಗೆ ಕಿಡ್ನಿ ಖಾಯಿಲೆ ಇತ್ತು ಎಂದರೆ ಸರಿ. ನಮ್ಮ ಮನೆಯಲ್ಲಿ ನಮ್ಮ ತಂದೆಯವರೇ ಯಜಮಾನರು ಎಂದರೆ ಸರಿ. ಸದರಿ ಖಾಯಿಲೆ ಇರುವ ಕಾರಣ ವ್ಯವಸಾಯವನ್ನು ಮಾಡುತ್ತಿರುವ ಕೆಲಸವನ್ನು ಬಿಟ್ಟಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ಹುಷಾರಾಗಿದ್ದು, ಊರಿಗೆ ಓಡಾಡುವಷ್ಟು ಸಾಮರ್ಥ್ಯವಾಗಿದ್ದರು. ಮೈಸೂರಿನಿಂದ ಹಿರಿಯೂರು ದೂರವಿದ್ದು, ಅಲ್ಲಿಗೆ ಓಡಾಡುವಷ್ಟು ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.
3. ನನ್ನ ತಂದೆ ಯಾವುದೇ ರೀತಿ ವ್ಯವಸಾಯ ಮಾಡದೇ ಇದ್ದರೂ ಸಹ ಕೇಸಿಗಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ರಿಂದ 3 ರಿಂದ ನಮ್ಮ ಕುಟುಂಬಕ್ಕೆ ಯಾವುದೇ ಆದಾಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಆದಾಯ ಬರದೇ ಇದ್ದರೂ ಸಹ ನಾನು ಬರುತ್ತಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತುಮಕೂರಿನಲ್ಲಿ ನಮ್ಮ ತಂದೆ ಕೆಲಸ ಮಾಡುವಾಗ ಒಳ್ಳೆ ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ. ನನ್ನ ತಂದೆಗೆ ಇಂತಿಷ್ಟೇ ಆದಾಯ ಬರುತ್ತಿತ್ತು ಎಂದು

ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿಲ್ಲ, ಬೇಕಾದಲ್ಲಿ ಕಾಲೇಜಿನಲ್ಲಿ ಕೇಳಿ ಪಡೆದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

4. ದಿನಾಂಕ 24.11.2017 ರಂದು ನನ್ನ ತಂದೆ ದಾವಾ ಐಟಂ ನಂ. 4 ರ ನಿವೇಶನವನ್ನು ತನ್ನ ಸಂಬಳದಲ್ಲಿ ಉಳಿಸಿದ ಹಣದಿಂದ ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಪಿತ್ರಾರ್ಜಿತ ಆಸ್ತಿಯ ಸಂಪಾದನೆಯಿಂದ ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ಪಿತ್ರಾರ್ಜಿತ ಆಸ್ತಿಗಳಾದಂತಹ ದಾವಾ ಐಟಂ ನಂ.1 ಮತ್ತು 2 ರ ಜಮೀನು ಕುಷ್ಕಿ ಜಮೀನು ಎಂದರೆ ಸದರಿ ಜಮೀನುಗಳಲ್ಲಿ ಬೋರ್ ವೆಲ್ ಇತ್ತು ಮತ್ತು ವಾಣಿವಿಲಾಸ ಡ್ಯಾಂನಿಂದ ನೀರು ಬರುತ್ತಿದ್ದು, ವ್ಯವಸಾಯ ಮಾಡಲಾಗುತ್ತಿತ್ತು ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ದಾಖಲಾತಿಯಲ್ಲಿ ಬೋರ್ ವೆಲ್ ವ್ಯವಸ್ಥೆ ಮತ್ತು ನೀರಿನ ಮೂಲದ ಯಾವುದೇ ವ್ಯವಸ್ಥೆ ಇಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪಹಣಿಯನ್ನು ತೆಗೆದು ನೋಡಿದರೆ ಬೋರ್ ವೆಲ್ ಇದೆ ಎಂದು ಬರುತ್ತಿದೆ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ.

5. ಬೋರ್ ವೆಲ್ ಇದೆ ಎಂದು ಹೇಳಿದ್ದು, ಅದಕ್ಕೆ ಸಂಬಂಧಿಸಿದಂತೆ Power Installation ದಾಖಲಾತಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಬೆಳೆಯ ಬಗ್ಗೆ ತಿಳಿಸಿದ್ದು, ಸದರಿ ವಿಚಾರವನ್ನು ವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಯಾವ ವರ್ಷ ಏನೆಲ್ಲಾ ಆದಾಯ ಬಂದಿದೆ ಎಂದರೆ ಸಾಕ್ಷಿಯು ನಾವು ಚಿಕ್ಕವರಿದ್ದು, ನನ್ನ ತಂದೆಯವರು ಹೇಳಿದ್ದ ಕಾರಣ ನಮಗೆ ಜಮೀನಿನಲ್ಲಿ ಬೆಳೆ ಬೆಳೆಯುತ್ತಿದ್ದರು ಎಂದು ಗೊತ್ತಿದೆ, ಅದರ ಬಗ್ಗೆ ವಯಕ್ತಿಕ ಮಾಹಿತಿ ಇದೆ, ಯಾವೆಲ್ಲಾ ಮಂಡಿಗೆ ಎಷ್ಟು ಬೆಳೆ ಹಾಕಿದ್ದಾರೆ ಎಂದು ಆ ಬಗ್ಗೆ ನನಗೆ ಮಾಹಿತಿ ಇಲ್ಲ.

6. ಪಿತ್ರಾರ್ಜಿತ ಆಸ್ತಿಗಳಿಂದ ಯಾವುದೇ ಆದಾಯ ಇಲ್ಲದೇ ಇದ್ದರೂ ಸಹ ನ್ಯಾಯಾಲಯದಲ್ಲಿ ಆದಾಯ ಬರುತ್ತಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತನ್ನ ಸ್ವಂತ ಸಂಬಳದಿಂದ ದಾವಾ ಐಟಂ ನಂ.4 ರಲ್ಲಿ ಒಂದು ಆರ್.ಆರ್.ಸಿ.ಸಿ. ಮನೆಯನ್ನು ಕಟ್ಟಿಸಿದ್ದರು ಎಂದರೆ ಸರಿಯಲ್ಲ, ಸದರಿ ಮನೆಯನ್ನು ಪಿತ್ರಾರ್ಜಿತ ಆಸ್ತಿಗಳ

ಆದಾಯದ ಮೂಲಕ ಕಟ್ಟಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮನೆಯನ್ನು ನನ್ನ ತಂದೆ ಸಂಬಳದ ಹಣದಿಂದ ಕಟ್ಟಿಸಿದ್ದು, ಪಿತ್ರಾರ್ಜಿತ ಆಸ್ತಿಯ ಹಣದಿಂದ ಅಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ 4 ರ ಆಸ್ತಿಯ ದಾಖಲಾತಿಗಳು ನನ್ನ ತಂದೆಯ ಹೆಸರಿಗೆ ಬದಲಾವಣೆಯಾಗಿದ್ದು, ಸದರಿ ಆಸ್ತಿಯು ನನ್ನ ತಂದೆಯ ಸಂಪೂರ್ಣ ಮಾಲೀಕತ್ವದಲ್ಲಿ ಇತ್ತು ಎಂದರೆ ಸರಿಯಲ್ಲ.

7. ನಮ್ಮ ತಂದೆಗೂ ಮತ್ತು ನಮಗೂ ವೈಮನಸ್ಸು ಉಂಟಾಗಿದ್ದ ಕಾರಣ ಅವರು ನಮ್ಮ ದೊಡ್ಡಪ್ಪನ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪನವರೇ ನನ್ನ ತಂದೆಯ ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ನಿಭಾಯಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ಆದಿಚುಂಚನಗಿರಿ ಆಸ್ಪತ್ರೆ, ವಿಕ್ಟೋರಿಯಾ, ಎಂ.ಎಸ್.ರಾಮಯ್ಯ ಆಸ್ಪತ್ರೆ ಮತ್ತು ಇತ್ಯಾದಿ ಆಸ್ಪತ್ರೆಗಳಿಗೆ ನನ್ನ ದೊಡ್ಡಪ್ಪನವರೇ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ನಾನು ನನ್ನ ತಾಯಿ ಕರೆದುಕೊಂಡು ಹೋಗಿದ್ದೆವು. ನನ್ನ ದೊಡ್ಡಪ್ಪನವರೇ ಕರೆದುಕೊಂಡು ಹೋಗಿದ್ದರೂ ಸಹ ನಾನು ಮತ್ತು ನನ್ನ ತಾಯಿ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪನ ಬಳಿ ಎಲ್ಲಾ ಆಸ್ಪತ್ರೆಗಳ ಖರ್ಚು ಮಾಡಿದ್ದು, ಅದರ ಮೂಲ ದಾಖಲಾತಿಗಳೆಲ್ಲಾ ನನ್ನ ದೊಡ್ಡಪ್ಪನ ಬಳಿ ಇದ್ದು, ನಾನು ನಕಲಿ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

8. ನನಗೂ ನನ್ನ ತಂದೆಗೂ ವೈಮನಸ್ಸು ಇದ್ದ ಕಾರಣ ಅವರು ನಮ್ಮ ಜೊತೆ ಇರಲಿಲ್ಲ ಎಂದರೆ ಸರಿಯಲ್ಲ, ಅವರು ಸಾಯುವವರೆಗೂ ನಮ್ಮ ಜೊತೆಯಲ್ಲಿಯೇ ಇದ್ದುರು. ನಮ್ಮ ದೊಡ್ಡಪ್ಪ ನನ್ನ ತಂದೆಯ ಆಸ್ಪತ್ರೆಯ ಖರ್ಚು ವೆಚ್ಚವನ್ನು ನೋಡಿಕೊಂಡ ಕಾರಣ ನನ್ನ ತಂದೆಯವರೇ ದಾವಾ ಐಟಂ ನಂ. 4 ರ ಆಸ್ತಿಯನ್ನು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ಕೇಸು ದಾಖಲಾದ ಒಂದು ತಿಂಗಳ ನಂತರ ದಾನಪತ್ರವನ್ನು ಬರೆಸಿಕೊಂಡಿದ್ದು, ನಮಗೆ ಮೋಸ ಮಾಡುವ ಉದ್ದೇಶದಿಂದ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೋಸ ಮಾಡುವ ಉದ್ದೇಶದಿಂದ ಬರೆಸಿಕೊಂಡಿಲ್ಲ ನಮ್ಮ ತಂದೆಯೇ ಒಪ್ಪಿ ಸ್ವಇಚ್ಛೆಯಿಂದ ದಾನಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

9. ದಾನಪತ್ರವನ್ನು ನನ್ನ ತಂದೆಯು ಸ್ವಇಚ್ಚೆಯಿಂದ ಬರೆದುಕೊಟ್ಟ ಕಾರಣ ಸ್ವಾಧೀನತೆಯನ್ನು ನಮ್ಮ ದೊಡ್ಡಪ್ಪ ಪಡೆದಿದ್ದಾರೆ ಎಂದರೆ ಸಾಕ್ಷಿಯು ನಮಗೆ ಮೋಸ ಮಾಡುವ ಉದ್ದೇಶದಿಂದ ಸ್ವಾಧೀನಕ್ಕೆ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ಖಾತೆ ದಾಖಲಾತಿಗಳೆಲ್ಲಾ ನನ್ನ ದೊಡ್ಡಪ್ಪನ ಹೆಸರಿಗೆ ಬದಲಾಗಿದೆ ಎಂದರೆ ಸರಿ. ನನ್ನ ತಂದೆಯ ಚಿಕಿತ್ಸೆಗೆ ಸಾಕಷ್ಟು ಹಣವನ್ನು ನನ್ನ ದೊಡ್ಡಪ್ಪ ಖರ್ಚು ಮಾಡಿದ್ದು, ಅವರು ತುಂಬಾ ಬಡತನದಲ್ಲಿ ಇದ್ದು, ಸದರಿ ದಾವಾ ಐಟಂ ನಂ. 4 ರ ಆಸ್ತಿಯನ್ನು 5 ನೇ ಪ್ರತಿವಾದಿಗ ದಿನಾಂಕ 02.02.2021 ರಂದು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಮಗೆಲ್ಲಾ ಮೋಸ ಮಾಡಿ ಆಸ್ತಿಯನ್ನು ಬರೆಸಿಕೊಂಡು ಅವರ ಮಕ್ಕಳ ಮದುವೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಅವರ ಮಕ್ಕಳ ಮದುವೆಗಾಗಿ ಸಾಲ ಮಾಡಿಲ್ಲ, ನಮ್ಮ ತಂದೆಯ ಚಿಕಿತ್ಸೆಗಾಗಿ ಮಾಡಿದಂತಹ ಸಾಲದ ಹಣವನ್ನು ತೀರಿಸಲು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ, ನಮ್ಮ ತಂದೆಗೆ ಯಾವುದೇ ಖರ್ಚು ಮಾಡಿರುವುದಿಲ್ಲ.

10. 5 ನೇ ಪ್ರತಿವಾದಿಯು ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಸದುದ್ದೇಶದಿಂದ ದಾವಾ ಐಟಂ ನಂ. 4 ರ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಅವರು ಸರಿಯಾಗಿ ಪರಿಶೀಲನೆ ಮಾಡಿಲ್ಲ, ಮುನ್ಸಿಪಾಲ್ ಕಛೇರಿಯಲ್ಲೂ ಸಹ ನ್ಯಾಯಾಲಯದಲ್ಲಿ ದಾವೆ ದಾಖಲಾಗಿರುವುದು ನಮೂದಾಗಿದ್ದರೂ ಸಹ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವೆಯ ಬಗ್ಗೆ 5 ನೇ ಪ್ರತಿವಾದಿಗೆ ಯಾವುದೇ ಮಾಹಿತಿ ಇಲ್ಲದೇ ಸದ್ಭಾವನೆಯಿಂದ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಮುನ್ಸಿಪಾಲ್ ಕಛೇರಿಯಲ್ಲಿ ಈ ಬಗ್ಗೆ ನಮೂದಾಗಿದ್ದು, ಒತ್ತಡತಂದು ಖರೀದಿಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

11. 5 ನೇ ಪ್ರತಿವಾದಿಯ ಹೆಸರಿಗೆ ಶಿರಾ ಮುನ್ಸಿಪಾಲ್ಟಿಯಲ್ಲಿ ದಾವಾ ಐಟಂ ನಂ. 4 ಕ್ಕೆ ಸಂಬಂಧಿಸಿದಂತೆ ಖಾತೆ ಬದಲಾವಣೆಯಾಗಿದೆ ಎಂದರೆ ಸಾಕ್ಷಿಯು ನಾವು ತಕರಾರು ಅರ್ಜಿ ಸಲ್ಲಿಸಿದ ನಂತರವೂ ಒತ್ತಡ ತಂದು ಖಾತೆ ಮಾಡಿಸಿಕೊಂಡಿದ್ದಾರೆ. ನಾನು ಯಾವುದೇ ತಕರಾರು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ರಸೀದಿ ಇದೆ, ಬೇಕಾದಲ್ಲಿ ನ್ಯಾಯಾಲಯಕ್ಕೆ ಕೊಡುತ್ತೇನೆ. ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳಿಂದ ಯಾವುದೇ

ಆದಾಯ ಇರಲಿಲ್ಲ, ನನ್ನ ತಂದೆಯು ತನ್ನ ಸ್ವಯಾರ್ಜಿತ ಆದಾಯದಿಂದ ಖರೀದಿ ಮಾಡಿದ ದಾವಾ ಐಟಂ ನಂ.4 ರ ಆಸ್ತಿಯನ್ನು ದಾನ ಪತ್ರದ ಮುಖಾಂತರ ನನ್ನ ದೊಡ್ಡಪ್ಪನಿಗೆ ಕೊಟ್ಟಿದ್ದು, ಅವರು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ತಿಳಿದಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**